III and Class IV. After the formation of the Karnataka Dairy Development Corporation, Bangalore Dairy comes under it and its jurisdiction also extends to Mysore Dairy and also Dairies to be commissioned at Hassan and Tumkur. We are contemplating to send some of these employees from Bangalore Dairy to other places where they can be posted to attend to work so that the burden of overhead charges are reduced. As it is the overhead charges per litre of milk in Bangalore Dairy will be 40 paise. The present staff strength of Bangalore Dairy is 669, and I think it will not require more than 100 persons, and according to the latest technique 18 persons can man this Dairy.

ಹಾಸನ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಾಡನ್ನು ಅಭಿವೃದ್ಧಿಪಡಿಸುವುದು

೪೪೯. ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಅರಣ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಹಾಸನ ತಾಲೂಕಿನ ಮದೇನೂರು, ಮುದ್ದನಹಳ್ಳಿ, ಕಣಿವೆಬ್ಯಾಡರಹಳ್ಳಿ, ಹರಿಹರಪುರ, ಹಂಪನಹಳ್ಳಿ, ಜಾಗರವಳ್ಳಿ ಮತ್ತು ಬಿಜಾಮಾರನಹಳ್ಳಿಗಳ ಸುಮಾರು ಒಂದು ಸಾವಿರ ಎಕರೆಗಳ ಗೋಮಾಳದನ್ನಿ ರಾಜ್ಯದ ಲ್ಯಾಂಡ್ ಆರ್‌ಮಿಯವರು ಕಾಡು ಬೆಳೆಸಲು ಗಿಡಗಳನ್ನು ನೆಟ್ಟು ಫಾರೆಸ್ಟ್ ಇಲಾಖೆಗೆ ವಹಿಸಿಕೊಟ್ಟಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ಯಾವ ತಾರೀಖಿನಲ್ಲಿ ಲ್ಯಾಂಡ್‌ಆರ್‌ಮಿಯವರು ಈ ಪ್ರದೇಶವನ್ನು ಫಾರೆಸ್ಟ್ ಇಲಾಖೆಗೆ ವಹಿಸಿಕೊಟ್ಟರು ;

(ಇ) ಸುಮಾರು ಸಾವಿರ ಎಕರೆಗಳಲ್ಲಿ ಗಿಡ ನೆಡಲು ಲ್ಯಾಂಡ್ ಆರ್‌ಮಿಯವರಿಗೆ ತಗುಲಿದ ವೆಚ್ಚವೆಷ್ಟು;

(ಈ) ಈ ಪ್ರದೇಶದಲ್ಲಿ ಫಾರೆಸ್ಟ್ ಇಲಾಖೆಗೆ ವಹಿಸಿಕೊಟ್ಟಮೇಲೆ ಕಾಡನ್ನು ಅಭಿವೃದ್ಧಿಪಡಿಸಲು ಫಾರೆಸ್ಟ್ ಇಲಾಖೆಯವರು ಯಾವ ಯಾವ ಕ್ರಮ ತೆಗೆದುಕೊಂಡಿದ್ದಾರೆ ;

(ಉ) ಈ ಬಾಬ್ತು ಖರ್ಚಾದ ಹಣವೆಷ್ಟು?

ಶ್ರೀ ಸಿ. ಎನ್. ಪಾಟೀಲ್ (ಅರಣ್ಯ ಮಂತ್ರಿಗಳು).—

(ಅ) ನಿಜ. ವಿವರಗಳು ಹೀಗಿವೆ;

ಗ್ರಾಮ	ಸ. ನಂ.	ವಿಸ್ತೀರ್ಣ	ಬ್ಲಾಕ್ ನಂ.
(೧) ಮದೇನೂರು	೨೯೮,೪೭ ಮತ್ತು ೪೮	೧೩೦ ಎಕರೆ	I
(೨) ಮುದ್ದನಹಳ್ಳಿ	೪೭ ಮತ್ತು ೪೮		,,
(೩) ಕಣಿವೆಬ್ಯಾಡರಹಳ್ಳಿ	೨೫,೨೮ ಮತ್ತು ೨೦೯	೨೦೦ ಎಕರೆ	II
(೪) ಹಂಪನಹಳ್ಳಿ	೮ ಮತ್ತು ೯	೧೦೦ ಎಕರೆ	III
(೫) ಹರಿಹರಪುರ	೯೭ ಮತ್ತು ೯೮	೧೨೦ ಎಕರೆ	IV
(೬) ಜಾಗರವಳ್ಳಿ	೭		
(೭) ಬಿಜಾಮಾರನಹಳ್ಳಿ	೫೨	೧೦೫ ಎಕರೆ	V
(೮) ಬಿ. ಹೊಸಳ್ಳಿ	೧೨		
		೬೬೫ ಎಕರೆ	

(ಆ) ೧೯೭೨ನೇ ಡಿಸೆಂಬರ್

(ಇ) ೬೬೫ ಎಕರೆಗಳಲ್ಲಿ ಗಿಡ ನೆಡಲು ತಗಲಿದ ವೆಚ್ಚ ೧.೦೩ ಲಕ್ಷ ರೂಪಾಯಿಗಳು.

(ಈ) (ಅ) ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿರುವ ಪ್ರದೇಶಗಳಲ್ಲಿ ನೀಲಗಿರಿ ಬೀಜಗಳನ್ನು ಬಿತ್ತಿ ಸುಮಾರು ೨೫೦ ಎಕರೆ ಪ್ರದೇಶಗಳಲ್ಲಿ ನೀಲಗಿರಿ ಗಿಡಗಳನ್ನು ಟ್ರೆಂಚ್‌ವತಕಾಂಡ್ ಮಾಡಿ ನೆಡಿಸಲಾಗಿದೆ.

(ಉ) ೭೩೨.೭೫ ರೂಪಾಯಿಗಳು.

ಶ್ರೀ ಕೆ ಹೆಚ್. ಹನುಮೇಗೌಡ.—ಸ್ವಾಮಿ ಲ್ಯಾಂಡ್ ಆರ್‌ಮಿ ಅವರು ೧ ಲಕ್ಷ ೩೧ ಸಾವಿರ ರೂಪಾಯೀಗಳನ್ನು ಖರ್ಚು ಮಾಡಿ ಸುಮಾರು ೬೬೫ ಎಕರೆಯಲ್ಲಿ ಕಾಡು ಬೆಳೆಸಲು ಸಸಿಗಳನ್ನು ನೆಟ್ಟು ೧೯೭೨ನೇ ಇಸವಿಯಲ್ಲಿ ವಹಿಸಿಕೊಟ್ಟರು ಅಲ್ಲಿಂದ ಈಚೆಗೆ ಕಾಡು ಪ್ರದೇಶವನ್ನು ಅಭಿವೃದ್ಧಿಪಡಿಸುವುದಕ್ಕೆ, ಉಸ್ತುವಾರಿ ನೋಡಿಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮವನ್ನು ಇಲಾಖೆ ತೆಗೆದುಕೊಂಡಿದೆ ಎಂಬುದನ್ನು ತಿಳಿಸುತ್ತೀರಾ?

† ಶ್ರೀ ಸಿ. ಎನ್. ಪಾಟೀಲ್.—ಹಣದ ಕೊರತೆಯಿಂದ ಆಗ ಮಾಡಲಿಕ್ಕೆ ಆಗಲಿಲ್ಲ. ಹಣದ ಪರಿಸ್ಥಿತಿ ಉತ್ತಮವಾಗಿರುವುದರಿಂದ ಇನ್ನು ಮುಂದೆ ಅಂದರೆ ಈ ವರ್ಷ ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶದಲ್ಲಿ ಕಾಡು ಬೆಳೆಸುವ ಕೆಲಸ ಇಲಾಖೆಗೆ ವಹಿಸಿಕೊಟ್ಟರು. ಈ ಸದನದಲ್ಲಿ ನಾನು ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇನೆ. ಗೋಮಾಳದಲ್ಲಿ ಯೂಕ್ಲಿಪ್ಟಸ್ ಗಿಡ ನೆಡುವುದರಿಂದ ಹೇಲ್ಲು ಹಾಳಾಗುತ್ತದೆ ಹಿಂದು ಹೇಳಿದ್ದೇನೆ ಮತ್ತು ಈಗ ಪುನಹ ಯೂಕ್ಲಿಪ್ಟಸ್ ಸಸಿ ನೆಡುತ್ತಿದ್ದಾರೆ. ಆ ಪ್ರದೇಶದಲ್ಲಿ ಇರತಕ್ಕ ಗೋಸಂಪತ್ತು, ಪಶು ಸಂಪತ್ತು ಉಳಿಯಬೇಕೇ ಬೇಡವೇ ? ಜನಗಳ ಹಿತದೃಷ್ಟಿಗೆ ವಿರುದ್ಧವಾಗಿ ಕಾರ್ಯಕ್ರಮ ಯಾತಕ್ಕೆ ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ಸಿ. ಎನ್. ಪಾಟೀಲ್.—ಎಲ್ಲೆಲ್ಲಿ ಗೋಮಾಳ ಇದೆ ಅಲ್ಲಿ ಯೂಕ್ಲಿಪ್ಟಸ್ ಪ್ಲಾಂಟೇಷನ್ ಜೊತೆಗೆ ಹುಲ್ಲು ಬೆಳೆಯುವ ಸ್ಪೀಸಿಸ್ ಮತ್ತು ಲೋಕಲ್ ಜನರಿಗೆ ಫೈರ್‌ವುಡ್‌ಗೆ ಅನುಕೂಲಕ್ಕಾಗಿ ಮತ್ತು ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್‌ಗಾಗಿ ಅನುಕೂಲವಾಗುವಂತಹ ಸಸಿಗಳನ್ನು ಹಾಕುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಬಾಪುಗೌಡ.—೬೬೫ ಎಕರೆಯಲ್ಲಿ ಕಾಡು ಬೆಳೆಸುವುದಕ್ಕೆ ೧ ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದೀರಿ. ಹಾಗೆ ಬೆಳೆಸಿದ ಕಾಡನ್ನು ೭೪-೭೫ರಲ್ಲಿ ಯಾವ ರೀತಿಯಿಂದ ರಕ್ಷಣೆ ಮಾಡುವುದಕ್ಕೂ ಆಸಕ್ತಿ ವಹಿಸಿಲ್ಲ. ಈಗ ನೆಟ್ಟಂತಹ ಗಿಡಗಳು ಎಷ್ಟು ಉಳಿದಿವೆ? ಆ ಪ್ರದೇಶದಲ್ಲಿ ಉಳಿದಂತಹ ಗಿಡಗಳಿಗೆ ಈ ವರ್ಷ ಎಷ್ಟು ಹಣಕಾಸು ಕೊಟ್ಟು ರಕ್ಷಣೆ ಮಾಡುತ್ತೀರಿ ?

ಶ್ರೀ ಸಿ. ಎನ್. ಪಾಟೀಲ್.—ಇದುವರೆಗೆ ಹಣದ ಅಭಾವದಿಂದ ಪ್ರೊಟೆಕ್ಷನ್ ಮೆಷರ್ಸ್ ತೆಗೆದು ಕೊಳ್ಳುತ್ತಾ ಇರಲಿಲ್ಲ. ಇನ್ನು ಮೇಲೆ ಈ ವರ್ಷ ಪ್ಲಾಂಟೇಷನ್ ಏನು ಮಾಡುತ್ತಿದ್ದೇವೆ ಅದರಲ್ಲಿ ಅರ್ಧ ಕ್ಕಾದರೂ ತಂತಿ ಬೇಲಿ ಹಾಕಬೇಕು ಎಂದು ಮಾಡಿದ್ದೇವೆ, ಪ್ರೊಟೆಕ್ಷನ್ ಕಾರ್ಯಕ್ರಮ ಮುಂದೆ ಹಾಕಿ ಕೊಳ್ಳುತ್ತೇವೆ.

ಶ್ರೀ ಕೆ ಹೆಚ್. ಹನುಮೇಗೌಡ.— ಹಣದ ಅಭಾವದಿಂದ ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗಲಿಲ್ಲ ಎಂದು ಹೇಳಿದಿರಿ. ಕಷ್ಟಪಟ್ಟು ಮಾಡಿದರೂ ಮೂರು ವರ್ಷದಲ್ಲಿ ಅದರ ಅರ್ಧ ಹೊರಟುಹೋಯಿತು. ಅದನ್ನು ಮುಂದೆ ಅಭಿವೃದ್ಧಿಪಡಿಸುವುದಕ್ಕೆ, ಅದರ ಉಸ್ತುವಾರಿಗೆ ಎಷ್ಟು ಹಣ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಿ ಸ್ವಾಮಿ ?

ಶ್ರೀ ಸಿ. ಎನ್. ಪಾಟೀಲ್.—ಎಷ್ಟು ಹಣ ಅವಕಾಶವಾಗುತ್ತದೋ ಅಷ್ಟು ಹಣ ಒದಗಿಸ.ತ್ತೇವೆ.

Construction of Bus Stand at Shahabad Town

526. SMT. VIJAYA DESAI (Chittapur).—Will the Minister for Transport and Tourism be pleased to state.—

(a) whether there is any proposal to construct a bus stand at Shahabad Town;